ಇಂಗ್ಲಿಷ್ ಅಧ್ಯಾಪಕರಾಗಿ ಸೇರಿಕೊಂಡರು. ಅವರು ಸೂಟಿಯಲ್ಲಿ ಧಾರವಾಡಕ್ಕೆ ಬಂದು ನಮ್ಮ ಮನೆಯಲ್ಲೇ ಇರುತ್ತಿದ್ದರು. ಹೀಗೆ 1960ರ ಮೇ ಸೂಟಿಯಲ್ಲಿ ಧಾರವಾಡಕ್ಕೆ ಬಂದಾಗ ಜಿ.ಬಿ., ಗಿರೀಶರ 'ಯಯಾತಿ' ನಾಟಕದ ಹಸ್ತಪ್ರತಿಯನ್ನು ಕೀರ್ತಿಯವರ ಕೈಯಲ್ಲಿಟ್ಟು ಓದಿ ನೋಡಲು ಹೇಳಿದರು. ಕೀರ್ತಿ ಓದಿ, ಅದರಲ್ಲಿಯ ನಾಟಕೀಯ ಅಂಶಗಳನ್ನು ಗಮನಿಸಿ 'ಇದೊಂದು ಅದ್ಭುತ ನಾಟಕವಾಗಬಲ್ಲದು' ಎಂದು ಭವಿಷ್ಯ ನುಡಿದಿದ್ದರು. ಗಿರೀಶರ ಮನೆ ಭಾಷೆ ಕೊಂಕಣಿ; ಕಲಿತ ಭಾಷೆ ಕನ್ನಡ. ಹೀಗಾಗಿ ಮೊದಲಿನ 'ಯಯಾತಿ'ಯ ಅವರ ಕನ್ನಡ ಭಾಷೆ ಅಷ್ಟೊಂದು ಸರಿಯಾಗಿರಲಿಲ್ಲ. ಅದನ್ನೆಲ್ಲ ಆಡುಭಾಷೆಗೆ ತಿದ್ದಿದವರು – ಕೀರ್ತಿಯವರು.

ಮುಂದೆ ಇಂಗ್ಲೆಂಡಿಗೆ ಹೋದ ಮೇಲೆ ಅಲ್ಲಿ ಸಾಕಷ್ಟು ಸಂಶೋಧನೆ ಮಾಡಿ ಅವರ ಆತ್ಮೀಯ ಗೆಳೆಯ ಕೃಷ್ಣ ಬಸರೂರರೊಂದಿಗೆ ಚರ್ಚಿಸಿ ಬರೆದ ನಾಟಕ 'ತುಘಲಕ್'. ಕೃಷ್ಣ ಆಗ ಪ್ಯಾರಿಸ್‌ನಲ್ಲಿದ್ದರು. ಅಲ್ಲಿದ್ದಾಗಲೇ ಸಾಕಷ್ಟು ತಯಾರಿ ಮಾಡಿಕೊಂಡು, ಭಾರತಕ್ಕೆ ಬಂದ ನಂತರ 'ತುಘಲಕ್' ಬರೆದು ಮುಗಿಸಿದರು. 'ತುಘಲಕ್' ನಾಟಕದ ಬಿಡುಗಡೆಯನ್ನು ಧಾರವಾಡದ ಬಾಸೆಲ್ ಮಿಷನ್ ಹೈಸ್ಕೂಲಿನ 'ಟ್ಯಾಗೋರ್ ಹಾಲ್'ನಲ್ಲಿ ಬಿಡುಗಡೆ ಮಾಡಿದವರು ಕವಿ ದ.ರಾ. ಬೇಂದ್ರೆಯವರು. ಬಿಡುಗಡೆಯ ಹೊತ್ತಿಗೆ ಅವರು ಎರಡು ಕೈಚೀಲಗಳ ತುಂಬ ಬೇರೆ ಬೇರೆ ಪುಸ್ತಕಗಳನ್ನು ತಂದಿದ್ದರು. ಅಂದು ಅವರು ನುಡಿದ 'ಭವಿಷ್ಯವಾಣಿ' ನಿಜವಾಯಿತು. 'ಇಡೀ ದೇಶದ ಜನತೆಗೆ ಬೇಕಾದ ನಾಟಕ 'ತುಘಲಕ್'. ಇದು ಇಲ್ಲಿ ಅಲ್ಲಿ ದಿಲ್ಲಿಯಲ್ಲಿ ಪ್ರಯೋಗವಾಗಬೇಕು' ಎಂದು ಆಶಿಸಿದ್ದರು. ಹಾಗೆಯೇ ಅದೂ ನಿಜವೂ ಆಯಿತು. ಹಿಂದೀ ಭಾಷೆಗೆ ಅನುವಾದಗೊಂಡು ಇಬ್ರಾಹಿಂ ಅಲಕಾಝಿಯವರಿಂದ ದಿಲ್ಲಿಯಲ್ಲಿ ಅತ್ಯಂತ ಯಶಸ್ವೀ ಪ್ರಯೋಗಗಳೂ ಆದವು. ನಂತರ ನಾನು ಕೇಳಿದ ಒಂದು ಸಂಗತಿ – ಈ ನಾಟಕದ ಪ್ರದರ್ಶನವನ್ನು ವೀಕ್ಷಿಸಲು ಪ್ರಧಾನಿ ಇಂದಿರಾ ಗಾಂಧಿ ಬಂದಿದ್ದರಂತೆ. ನಾಟಕದ ಮಧ್ಯಭಾಗದಲ್ಲಿ ನಾಟಕದಲ್ಲಿ ಬರುವ ಜನರ ಹಾಹಾಕಾರದಿಂದ ಅಸ್ವಸ್ಥಗೊಂಡು, ಅರ್ಧಕ್ಕೇ ನಾಟ್ಯಗೃಹದಿಂದ ನಿರ್ಗಮಿಸಿದರಂತೆ.

> ಇಡೀ ದೇಶದ ಜನತೆಗೆ ಬೇಕಾದ ನಾಟಕ 'ತುಘಲಕ್'. ಇದು ಇಲ್ಲಿ ಅಲ್ಲಿ ದಿಲ್ಲಿಯಲ್ಲಿ ಪ್ರಯೋಗವಾಗಬೇಕು ಎಂದು ಆಶಿಸಿದ್ದರು ಬೇಂದ್ರೆ

ಕವಿ ದ.ರಾ. ಬೇಂದ್ರೆಯವರ ಸಾಕ್ಷ್ಯಚಿತ್ರವನ್ನು ನಿರ್ಮಿಸಲು ಕಾರ್ನಾಡರಿಗೆ ಕರ್ನಾಟಕ ಸರ್ಕಾರ ಒಪ್ಪಿಸಿದಾಗ, ಅವರು ನನ್ನನ್ನು ಪ್ರೊಡಕ್ಷನ್ ಮ್ಯಾನೇಜರ್ ಆಗಿ ಕೆಲಸ ಮಾಡಲು ಕೇಳಿಕೊಂಡರು. ಯಾವ ರೀತಿಯ ಅನುಭವ ಇಲ್ಲದಿದ್ದರೂ ಎಲ್ಲವನ್ನೂ ತಿಳಿಸಿಕೊಡುತ್ತ ನನ್ನನ್ನು ತರಬೇತುಗೊಳಿಸಿದರು. ಅದಾದ ನಂತರ ನಾನು ಪಿ.ಯು.ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ತಪಾಸಣೆಗೆಂದು ಬೆಂಗಳೂರಿಗೆ ಹೋದಾಗ, ಆ ಕಾರ್ಯ ಮುಗಿದೊಡನೆ, 'ಕಾಡು' ಸಿನಿಮಾದ ಚಿತ್ರೀಕರಣದಲ್ಲಿ ತೊಡಗಿಕೊಳ್ಳುತ್ತಿದ್ದೆ. ಅದು ಕನಕಪುರದಲ್ಲಿ ನಡೆಯುತ್ತಿತ್ತು. ಈ ಚಿತ್ರ ನಿರ್ಮಾಪಕರಾದ ಜಿ.ಎನ್. ಲಕ್ಷ್ಮೀಪತಿ ಮತ್ತು ಕೆ.ಎನ್. ನಾರಾಯಣ ನನ್ನ ಕೆಲಸವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದರು. ಮುಂದೆ ಅವರು ಗಿರೀಶರಿಗೆ 'ಒಂದಾನೊಂದು ಕಾಲದಲ್ಲಿ' ಚಿತ್ರವನ್ನು ನಿರ್ದೇಶಿಸಲು ಕೇಳಿದರು. ಆ ಚಿತ್ರದ ಶೂಟಿಂಗ್ ದಾಂಡೇಲಿಯ ಸುತ್ತಮುತ್ತ ಮತ್ತು ತುರುಮರಿಯ ವಾಡೆಯಲ್ಲಿ ನಡೆದಿತ್ತು. ಈ ಚಿತ್ರಕ್ಕೆ ಕೂಡ ನನ್ನನ್ನು ಪ್ರೊಡಕ್ಷನ್ ಮ್ಯಾನೇಜರ್ ಎಂದು, ಮತ್ತು ನನ್ನ ಜೊತೆಗೆ ಗಿರೀಶರ ಇನ್ನೊಬ್ಬ ಸ್ನೇಹಿತ – ಸತೀಶ ತಗರಪುರ ಅವರನ್ನು ನಿಯಮಿಸಿದರು. ನಿರ್ಮಾಪಕರು ನನ್ನ ಮೇಲಿಟ್ಟ ವಿಶ್ವಾಸಕ್ಕೆ ಮುಖ್ಯ ಕಾರಣರು ಗಿರೀಶರೇ.